# ಮಹತ್ವಾಂಕ್ಷೆಯ ಕನಸಿನ ಬೆಡಗಿ

**ಐಶ್ವರ್ಯಾ**
**ಉದಯದ 'ಸುಂದರಿ'ಯ ನಾಯಕಿ**



**◆ ಸೌಂದರ್ಯ ಸಮೀಕ್ಷೆಯ ಹೊಸ ವ್ಯಾಖ್ಯಾನ ಮಾಡ್ತಿದ್ದೀರಿ ಎಂದೆನಿಸುತ್ತದೆ...**

ಸುಂದರಿಯ ಕಥೆ ಬಾಹ್ಯಕ್ಕಿಂತ ಆಂತರಿಕ ಸಂಗತಿಗೆ ಮಹತ್ವವನ್ನು ನೀಡುತ್ತದೆ. ಹೊರ ನೋಟದ ಲೆಕ್ಕಾಚಾರದಲ್ಲಿಯೇ ಸೌಂದರ್ಯ ಮೌಲ್ಯಮಾಪನ ಮಾಡಲು ಆಗುವುದಿಲ್ಲ. ಅವರ ಮನಸ್ಸಿನೊಳಗೆ ಸೌಂದರ್ಯದ ಚಿತ್ರವನ್ನು ಗುರುತಿಸಬೇಕು ಎಂದು ಇದು ಹೇಳುತ್ತದೆ. ನೋಡಲು ಆಕರ್ಷಣೆಯಿಂದ ಕಾಣುವವರನ್ನೇ ನಾವು ಸುಂದರಿ ಎನ್ನುತ್ತೇವೆ. ಆದರೆ ಇಲ್ಲಿನ ಸುಂದರಿ ಹಾಗಲ್ಲ. ಮಹತ್ವಾಕಾಂಕ್ಷೆಯನ್ನು ಹೊತ್ತಿದ್ದಾಳೆ. ಐಎಎಸ್ ಅಧಿಕಾರಿಯಾಗಬೇಕು ಎಂದುಕೊಂಡಿದ್ದಾಳೆ. ಅವಳ ಕನಸಿನ ಹಾದಿಯಲ್ಲಿ ಸಾಗುವಾಗ ಎದುರಾಗುವ ಕಷ್ಟಗಳನ್ನು ಸಮರ್ಥವಾಗಿ ಎದುರಿಸಿ ಸಾಗುತ್ತಾಳೆ. ಅವಳಿಗೆ ವೈಯಕ್ತಿಕವಾಗಿ ಅಡ್ಡಿ ಮಾಡುವವರಿಗೂ ಒಳ್ಳೆಯದನ್ನು ಈ ಸುಂದರಿ ಬಯಸುತ್ತಾಳೆ. ಗ್ರಾಮಭಾರತದ ಬಹುತೇಕ ಕುಟುಂಬಗಳಲ್ಲಿ ನಡೆಯುವ ನೈಜತೆಯ ಅಂಶವನ್ನೂ ಇದು ಒಳಗೊಂಡಿದೆ.

**◆ 'ಫೇರ್' ಎನ್ನುವ ಪರಿಕಲ್ಪನೆಯನ್ನು ನೀವು ಹೇಗೆ ಕಟ್ಟಿಕೊಡುತ್ತೀರಿ?**

ದೈಹಿಕ ರಚನೆ, ಸೌಂದರ್ಯ ಎನ್ನುವುದು ಅನುವಂಶೀಯ ಲಕ್ಷಣ. ಚೆನ್ನಾಗಿದ್ದಾಳೆ–ಚೆನ್ನಾಗಿಲ್ಲ ಎನ್ನುವುದನ್ನು ಮೈ ಬಣ್ಣದಿಂದ ಅಳೆಯುತ್ತೇವೆ. ಅದಕ್ಕೆ ಶ್ವೇತ ವರ್ಣವನ್ನು ಬಳಸುತ್ತೇವೆ. ಕಪ್ಪುಬಣ್ಣದವರೂ ಎಷ್ಟೊಂದು ಸುಂದರವಾಗಿ ಇರುತ್ತಾರೆ. ಅದನ್ನು ಗುರುತಿಸುವ ಪ್ರಯತ್ನ ಮಾಡುವುದಿಲ್ಲ. ಕಡುಕಪ್ಪು ಇದ್ದರೂ ಚೆನ್ನಾಗಿರುತ್ತಾರೆ–ಜೊತೆಗೆ ಒಳ್ಳೆಯ ಮನಸ್ಸನ್ನೂ ಹೊಂದಿರಬಹುದು. ಯಾರನ್ನೇ ಆದರೂ ಕೇವಲ 'ಲುಕ್ – ಕಲರ್' ನೋಡಿ ಅವರು ಏನು ಎಂದು ಹೇಳುವುದು ಕಷ್ಟ. ಭಾರತೀಯರು ಗೋದಿ ಮೈಬಣ್ಣದವರಾಗಿದ್ದಾರೆ. ಜೊತೆಗೆ ಕಪ್ಪು, ಕೆಂಪು, ಬಿಳಿ ವರ್ಣದವರೂ ಇದ್ದಾರೆ. ಎಲ್ಲರನ್ನೂ ನಾವು ಒಳಗೊಳ್ಳಬೇಕು. ಬಣ್ಣಕ್ಕೆ ಮಹತ್ವ ನೀಡಬಾರದು ಮನುಷ್ಯನಲ್ಲಿ ಇರುವ ಮಾನವೀಯತೆ ಮತ್ತು ಒಳ್ಳೆಯತನಕ್ಕೆ ಮಾತ್ರ ಮೌಲ್ಯವನ್ನು ಕಟ್ಟಬೇಕು ಎಂದು ನಾನು ಬಯಸುತ್ತೇನೆ.

**◆ ಲವಲವಿಕೆಯ ಪಾತ್ರಗಳನ್ನು ನಿರ್ವಹಿಸಿದ್ದ ನೀವು ಇಂತಹ ಗೋಳಾಟದ ಕಥೆಗೆ ಹೇಗೆ ದನಿಯಾಗುತ್ತೀರಿ?**

ಗೋಳಾಟ ಅನ್ನೋದಕ್ಕಿಂತ ಇದು ಕುಟುಂಬಗಳ ಒಳಗಿನ ಕಥನ. ಎಲ್ಲರ ಮನೆಯಲ್ಲೂ ಇಂತಹ ಘಟನೆಗಳು ನಡೆದಿರುತ್ತವೆ. ನೋಡಲು ಬಡತನ, ದುಃಖ, ಅಳು ಕಾಣಿಸುತ್ತದೆ. ಆದರೆ ನೈಜತೆಯ ಅಂಶಗಳನ್ನು ಕಥೆ ನಿರೂಪಿಸುತ್ತದೆ. ವಾಸ್ತವ ಸನ್ನಿವೇಶಗಳನ್ನೇ ಕಲಾತ್ಮಕವಾಗಿ ತೋರಿಸುತ್ತಿದ್ದೇವೆ. ಇದು ಸ್ತ್ರೀ ಸಶಕ್ತಿಕರಣಕ್ಕೆ ಸ್ಫೂರ್ತಿಯನ್ನು ತುಂಬುತ್ತದೆ. ಇಲ್ಲಿ ಯಾರೂ ಖಳನಾಯಕರಿಲ್ಲ. ಸಂದರ್ಭ ಕೆಲವರನ್ನು ಹಾಗೆ ರೂಪಿಸಬಹುದು. ನಾನು 'ಅನುರೂಪ'ದಿಂದ 'ಸರ್ವಮಂಗಳ ಮಾಂಗಲ್ಯೇ'ವರೆಗೆ (ತೆಲುಗು ತಮಿಳು ಸೇರಿದಂತೆ) ಬಹುತೇಕ ಪಾತ್ರಗಳಲ್ಲಿ ತುಂಟ ಹುಡುಗಿಯಾಗಿದ್ದೆ. ಅದರಲ್ಲಿಯೇ ಒಂದಿಷ್ಟು ಗಂಭೀರ ಗುಣಗಳು ಇದ್ದವು. ಇದರ ಆರಂಭವೇ ಗಂಭೀರತೆಯಿಂದ ಕೂಡಿದೆ. ಕಡಿಮೆ ಮಾತಿನ ಭಾವುಕ ಹುಡುಗಿ. ಬೇರೆಯವರ ಭಾವನೆಗಳಿಗೆ ಈಕೆ ಸ್ಪಂದಿಸುತ್ತಾಳೆ. ತನ್ನವರೇ ಅಪಮಾನ ಮಾಡಿದರೂ ಅದನ್ನು ಸಹಿಸಿ ಹೇಗೆ ಧನಾತ್ಮಕವಾಗಿ ಸ್ವೀಕರಿಸುತ್ತಾಳೆ. ತನ್ನ ಕನಸು ಮುಟ್ಟಲು ಮೆಟ್ಟಿಲಾಗಿ ಅವುಗಳನ್ನು ಬಳಸುತ್ತಾಳೆ ಎನ್ನುವುದನ್ನು ಇಲ್ಲಿ ನೋಡಬಹುದು.

**◆ ನಿಮಗೆ ಕಥೆ ಪಾತ್ರ ಹೇಗಿರಬೇಕು ಎಂದು ಬಯಸುತ್ತೀರಿ?**

ಎಲ್ಲ ಕಲಾವಿದರೂ ವಿಭಿನ್ನತೆಯನ್ನು ಬಯಸುತ್ತಾರೆ. ಒಂದುಕಡೆ ಮಾಡಿದ್ದನ್ನೇ ಮತ್ತೊಂದೆಡೆ ಮಾಡುವುದು ಇಷ್ಟ ಆಗುವುದಿಲ್ಲ. ಯಾರಿಗೂ ಏಕರೂಪದ ಪಾತ್ರದಲ್ಲಿ ಕಾಣಿಸಿಕೊಳ್ಳುವ ಆಸೆ ಇರುವುದಿಲ್ಲ. ಬೇರೆ ಬೇರೆ ರಸಗಳನ್ನು ಬಿಂಬಿಸುವ ಪಾತ್ರಗಳು ಅಥವಾ ಗೆಟಪ್ ಇರಬೇಕು. ಆಗ ನಟಿಸಲು ಹೆಚ್ಚಿನ ಅವಕಾಶ ಇರುತ್ತದೆ. ಆಗ ಹೊಸದನ್ನು ಮಾಡಲು ವೇದಿಕೆ ಸಿಕ್ಕಹಾಗೆ ಆಗುತ್ತದೆ. ಆ ಹಿನ್ನೆಲೆಯಲ್ಲಿಯೇ ಈ ಪಾತ್ರವನ್ನು ನಾನು ತೆಗೆದುಕೊಂಡಿದ್ದು. ಇಂತಹ ಪಾತ್ರವನ್ನು ಇದುವರೆಗೆ ಮಾಡಿಲ್ಲ. ಇದಕ್ಕೆ ನ್ಯಾಯವನ್ನು ನೀಡುತೇನೆ ಎನ್ನುವ ವಿಶ್ವಾಸವಿದೆ

**◆ ನಟನೆಯನ್ನು ಕಲಿತಿದ್ದು ಹೇಗೆ?**

10ನೇ ತರಗತಿಯಲ್ಲಿ ಇದ್ದಾಗ ಬೆಂಗಳೂರಿನ 'ಬಿಂಬ' ರಂಗ ತಂಡದಲ್ಲಿ ಏಳು ತಿಂಗಳ ಕೋರ್ಸ್‌ಗೆ ಸೇರಿದ್ದೆ. ಅದನ್ನು ಮುಗಿಸಿದ ನಂತರ ಆಡಿಷನ್‌ಗೆ ಕರೆಗಳು ಬರ್ತಾ ಇದ್ದವು. ಆದರೂ ಪಿಯುಸಿ ಮುಗಿಯುವ ತನಕ ಪ್ರಯತ್ನವನ್ನೇ ಮಾಡಲಿಲ್ಲ. 'ಪುನರ್‌ವಿವಾಹ'ಕ್ಕೆ ಮೊದಲ ಆಡಿಷನ್ ನೀಡಿದೆ. 'ಕುಲವಧು'ವಿನಲ್ಲಿ ಪ್ರಮುಖ ಪಾತ್ರದಲ್ಲಿ ಅವಕಾಶ ಸಿಕ್ಕಿತು. 'ಅನುರೂಪ'ದಲ್ಲಿ ನಾಯಕಿಯಾಗಿ ನಿರ್ವಹಿಸಿದೆ. ಅದರ ಬೆನ್ನಿಗೆ 'ಗಿರಿಜಾ ಕಲ್ಯಾಣ' ಪೌರಾಣಿಕ ಧಾರಾವಾಹಿ ಮಾಡಿದೆ. ಅದು ಒಳ್ಳೆಯ ಹೆಸರನ್ನು ತಂದುಕೊಡ್ತು. ಒಂದಾದ ಮೇಲೆ ಒಂದು ಪಾತ್ರಗಳು ಸಿಗ್ತಾ ಹೋದವು. ನಿರಂತರ ಕಲಿಕೆ ಮತ್ತು ಪಾತ್ರ ನಿರ್ವಹಣೆ ಎರಡನ್ನೂ ಒಟ್ಟೊಟ್ಟಿಗೆ ಮಾಡುತ್ತಾ ಬಂದಿದ್ದೇನೆ.

**■ ರಾಘವೇಂದ್ರ ಕೆ.**